# 14

# ದೇವರ ಸತ್ಯದ ಮೌಲ್ಯ

## (2 ಥೆಸಲೊನೀಕ 2:13-3:5)

ಬೋಧಕರುಗಳು, ವಾಕ್ಯದ ಪ್ರಮುಖ ಮೂಲಗಳನ್ನು ಬೋಧಿಸುವದನ್ನು ಕಲಿತುಕೊಳ್ಳ ಬೇಕು. ಕೇಳುವವರು ತಮ್ಮ ವೈಯಕ್ತಿಕ ನಂಬಿಕೆಗೆ ಅನುಕೂಲವಾಗುವಂತೆ ಆ ವಾಕ್ಯವನ್ನು ಕಲಿಯಬೇಕು.

1 ಮತ್ತು 2 ತಿಮೊಥಿ ಹಾಗು ತೀತ ಈ ಮೂರು ಪತ್ರಿಕೆಗಳಲ್ಲಿ ಪ್ರಸಂಗಿಗಳ ಕುರಿತು ಹನ್ನೊಂದು ಸಾರಿ ಬರೆಯಲಾಗಿದೆ - ಅದರಲ್ಲಿ "ಸ್ವಸ್ಥ ಬೋಧನೆ" (1 ತಿಮೊಥೆ 1:10), "ಸುಬೋಧನೆಯ ಸಿದ್ಧಾಂತ" (1 ತಿಮೊಥೆ 4:6; 2 ತಿಮೊಥೆ 4:3; ತೀತ 1:9; 2:1), "ಪರಿಶುದ್ಧತೆಯ ಉಪದೇಶ" (ತೀತ 2:7), "ಸ್ವಸ್ಥವಾದ ಮಾತುಗಳು" (1 ತಿಮೊಥೆ 6:3; 2 ತಿಮೊಥೆ 1:13). "ಸ್ವಸ್ಥಬೋಧನೆಯಲ್ಲಿನ ನಂಬಿಕೆ" (ತೀತ 1:13; ಮತ್ತು ನೋಡಿ 2:2) ಮತ್ತು "ಸ್ವಸ್ಥವಾದ ವಾಕ್ಯ" (ತೀತ 1:9). ಪ್ರತಿಯೊಬ್ಬರು ವಾಕ್ಯದ ಸ್ವಸ್ಥ ಬೋಧನೆಗಳನ್ನು ಅರಿಯಬೇಕು, ಅದರಿಂದ ನಾವು, ಅದನ್ನು ಬಳಸುವದಕ್ಕೆ ಸಿದ್ಧರಾಗುವೆವು.

2 ಥೆಸಲೊನೀಕ 2:15ರಲ್ಲಿ ದೇವರ ವಾಕ್ಯದ ಸಂಬಂಧದಲ್ಲಿ ಮುಂದುವರಿಯ ಬೇಕೆಂದು ಅವರಿಗೆ ಉತ್ತೇಜನಮಾಡಲಾಗಿದೆ. ಸ್ವಸ್ಥ ಬೋಧನೆಯು ಏಕೆ ಪ್ರಾಮುಖ್ಯವಾಗಿದೆ - ಅವರಿಗೂ ಮತ್ತು ನಮಗೂ ಅದು ಮೌಲ್ಯವುಳ್ಳದ್ದಾಗಿದೆ ಏಕೆ?

### ದೇವರು ಸತ್ಯವನ್ನು ಬಳಸಿ ನಮ್ಮನ್ನು ರಕ್ಷಿಸುತ್ತಾನೆ (2:13, 14)

ಸೈತಾನನ ಶಿಬಿರದಲ್ಲಿ ಕಳೆದು ಹೋಗಿರುವ ಆತ್ಮಗಳನ್ನು ದೇವರ ರಕ್ಷಿಸಲ್ಪಟ್ಟಿರುವ ಸಮೂಹಕ್ಕೆ ಬದಲಾಯಿಸುವವರು ಯಾರು? ದೇವರೇ ಅದನ್ನು ಮಾಡುವನು. ಕಳೆದು ಹೋದ ಆತ್ಮಗಳನ್ನು ರಕ್ಷಿಸಲು ದೇವರು ಏನನ್ನು ಉಪಯೋಗಿಸುವನು? ದೇವರ ವಾಕ್ಯವನ್ನೆ.

ಯೇಸು ಕ್ರಿಸ್ತನ ಜೀವವುಳ್ಳ ವಾಕ್ಯದ ಸುವಾರ್ತೆಯ ಮುಖಾಂತರ ನಾವು ಕರೆಯ ಲ್ಪಟ್ಟಿದ್ದೇವೆ. ದೇವರು ಯೇಸು ಕ್ರಿಸ್ತನನ್ನು ವೈಯಕ್ತಿಕವಾಗಿ ಕಳುಹಿಸುವ ಮೂಲಕ, ಸಂದೇಶ ವನ್ನು ನೀಡಿರುವನು. ಆದುದರಿಂದ ಯೇಸು, ದೇವರ ವಾಕ್ಯವಾಗಿದ್ದಾನೆ (ಯೋಹಾನ 1:1). ಆತನು ನಮಗೆ ದೇವರ ಸಂದೇಶವಾಗಿದ್ದಾನೆ. ಸುವಾರ್ತೆಯ ಮೂಲಕ ದೇವರು ನಮ್ಮನ್ನು ಪ್ರಭಾವಕ್ಕೆ ಕರೆದಿರುವನು (2:14). ದೇವರು ನಮ್ಮನ್ನು ಕರೆಯುವದಕ್ಕಾಗಿ ಬೇರೆ ಮಾರ್ಗವನ್ನು ಹೊಂದಿರುವದಿಲ್ಲ. ಆದುದರಿಂದ ಅಪೊಸ್ತಲರು "ಜಗತ್ತಿಗೆಲ್ಲಾ ಸುವಾರ್ತೆಯನ್ನು ಸಾರಬೇ ಕೆಂದು" ಆದೇಶ ಹೊಂದಿದರು (ಮಾರ್ಕ 16:15). ದೇವರಿಗೆ ಉತ್ತರಿಸಿ, ಆಶೀರ್ವಾದವನ್ನು ಹೊಂದಲು ಬೇರೆ ಮಾರ್ಗವಿಲ್ಲ.

ದೇವರ ವಾಕ್ಯದಿಂದ ನಾವು ಕರೆಯಲ್ಪಟ್ಟು ಆದರಿಂದ ಶುದ್ಧಿಕರಿಸಲ್ಪಟ್ಟು ರಕ್ಷಣೆ ಹೊಂದಿರುವೆವು. "ರಕ್ಷಣೆಯನ್ನು ಪಡೆಯುವದಕ್ಕಾಗಿ ದೇವರು ನಿಮ್ಮನ್ನು ಆದಿಯಿಂದ ಆರಿಸಿ ಕೊಂಡದ್ದರಿಂದ" (2:13ಬಿ), ದೇವರ ಆತ್ಮನ ಸಹಾಯದಿಂದ ಸತ್ಯದ ಮೇಲೆ ನಂಬಿಕೆಯನ್ನಿಟ್ಟು, ದೀಕ್ಷಾಸ್ನಾನಕ್ಕೆ ನಡೆಸಲ್ಪಡುತ್ತೇವೆ. ನಾವು ವಿಧೇಯತೆಯಿಂದ ದೀಕ್ಷಾಸ್ನಾನಕ್ಕೆ ಒಳಗಾಗುವಾಗ, ತನ್ನ ಆತ್ಮದಿಂದ ದೇವರು ನಮ್ಮನ್ನು ರಕ್ಷಿಸುತ್ತಾನೆ. ಅನನೀ ಯನು ಸೌಲನಾಗಿದ್ದಂತಹ ಪೌಲನಿಗೆ, "ಈಗ ನೀನೇಕೆ ಸಾವಕಾಶ ಮಾಡುತ್ತಿ? ಎದ್ದು ಆತನ ಹೆಸರನ್ನು ಹೇಳಿಕೊಳ್ಳುವವನಾಗಿ ದೀಕ್ಷಾಸ್ನಾನ ಮಾಡಿಸಿಕೊಂಡು ನಿನ್ನ ಪಾಪಗಳನ್ನು ತೊಳೆ

ದುಕೋ ಅಂದನು" (ಅಪೊಸ್ತಲನು 22:16). ದೀಕ್ಷಾಸ್ನಾನದಲ್ಲಿ ನಾವುಗಳು ಪಾಪದಿಂದ ಶುದ್ಧರಾಗಿ ದೇವರೊಂದಿಗೆ ಒಂದಾಗುತ್ತೇವೆ.

ನಂತರ ರಕ್ಷಣೆಯು, ಎರಡು ಕರೆಗಳನ್ನು ಹೊಂದಿರುತ್ತದೆ. ದೇವರು ನಮ್ಮನ್ನು ಕರೆಯುತ್ತಾನೆ ಮತ್ತು ನಾವು ದೇವರನ್ನು ಕರೆಯುತ್ತೇವೆ. ಸುವಾರ್ತೆಯನ್ನು ನಾವು ಕಲಿಯುವಾಗ ಈ ಸಂಗತಿಯು ನಡೆಯುತ್ತದೆ. ಎರಡನೆಯದಾಗಿ, ಸುವಾರ್ತೆಗೆ ನಾವು ಪ್ರತಿಕ್ರಿಯಿಸುವಾಗ ಉಂಟಾಗುತ್ತದೆ, ವಾಕ್ಯವನ್ನು ಕಲಿತು, ರಕ್ಷಣೆಯ ಅಗತ್ಯತೆಯನ್ನು ತಿಳಿಯುವಾಗ, ಆತನ ವಾಕ್ಯದಲ್ಲಿ ಭರವಸವಿಟ್ಟು, ದೇವರ ರಕ್ಷಣೆಗಾಗಿ ಮೊರೆಯಿಡುತ್ತೇವೆ, ಮಾನಸಾಂತರದಿಂದ ದೀಕ್ಷಾಸ್ನಾನ ಮಾಡಿಸಿಕೊಳ್ಳುವವರಿಗೆ, ಈ ಸಂದೇಶವು ರಕ್ಷಣೆಯನ್ನು ನೀಡುತ್ತದೆ.

ದೇವರು ನೀಡುವ ರಕ್ಷಣಾವರವನ್ನು ದೇವರ ಬೋಧನೆಗೆ ವಿಧೇಯರಾಗುವ ಮೂಲಕ ಸ್ವೀಕರಿಸುತ್ತೇವೆ. "ಆದರೆ ನೀವು ಮುಂಚೆ ಪಾಪಕ್ಕೆ ದಾಸರಾಗಿದ್ದೂ ನಿಮಗೆ ಕಲಿಸಲ್ಪಟ್ಟ ಬೋಧನೆಗೆ ನೀವು ಮನಃಪೂರ್ವಕವಾಗಿ ಅಧೀನರಾದದರಿಂದಲೂ ಪಾಪದಿಂದ ಬಿಡುಗಡೆಯನ್ನು ಹೊಂದಿ ನೀತಿಗೆ ದಾಸರಾದದರಿಂದಲೂ ದೇವರಿಗೆ ಸ್ತೋತ್ರವಾಗಲಿ" (ರೋಮಾಪುರ 6:17, 18).

## ದೇವರು ಸತ್ಯವನ್ನು ಉಪಯೋಗಿಸಿ ನಮ್ಮನ್ನು ಬಲಪಡಿಸುತ್ತಾನೆ (2:15)

ನಾವು ರಕ್ಷಣೆ ಹೊಂದಿದಾಗ, ದೇವರು ತನ್ನ ವಾಕ್ಯದ ಮೂಲಕ ನಮ್ಮನ್ನು ಪ್ರೋತ್ಸಾಯಿಸಿ ಬಲವನ್ನು ನೀಡುವನು. ಅದು ನಮ್ಮ ವೃದ್ಧಿಗೆ, ಬೆಳವಣಿಗೆಗೆ ಸಹಾಯ ಮಾಡಿ ಜೀವನದಲ್ಲಿ ಪ್ರತಿಫಲವನ್ನು ನೀಡುತ್ತದೆ.

ಅದು ಹೇಗೆ ಸಾಧ್ಯ? 2:15ರಲ್ಲಿ ಉತ್ತರವಿದೆ: "ಹೀಗಿರುವದರಿಂದ ಸಹೋದರರೇ ದೃಢವಾಗಿ ನಿಲ್ಲಿರಿ. ನಾವು ಮಾತಿನಿಂದಾಗಲಿ ಪತ್ರಿಕೆಯಿಂದಾಗಲಿ ನಿಮಗೆ ತಿಳಿಸಿದ ಬೋಧನೆಗಳನ್ನು ನೀವು ಭದ್ರವಾಗಿ ಹಿಡಿದುಕೊಳ್ಳಿರಿ ["ಉಪದೇಶ"; NIV] ಆ ಬೋಧನೆಯು ನಮ್ಮ ಪತ್ರಿಕೆಯಿಂದಾಗಲೀ ಅಥವಾ ಮಾತಿನಿಂದಾಗಲಿ ಬೋಧಿಸಿರುವದೇ ಆಗಿದ್ದರೂ," ಈ "ಉಪದೇಶಗಳು" ಮನುಷ್ಯರ ಆಲೋಚನೆಯಾಗಿರದೇ. ಪ್ರೇರಿತವಾದ ಸಲಹೆಗಳಾಗಿರುತ್ತವೆ. ಈಗಾಗಲೇ ಥೆಸಲೊನೀಕದರು ಬಾಯಿಮಾತಿನಿಂದಲೂ ಹಾಗೂ ಪತ್ರಿಕೆಯಿಂದಲೂ, ಉಪದೇಶಗಳನ್ನು 1 ಥೆಸಲೊನೀಕ ಪತ್ರದಲ್ಲಿ ಹೊಂದಿದ್ದರು.

ಕ್ರೈಸ್ತರ ಬೆಳವಣಿಗೆಗೂ ಹಾಗೂ ಬಲಕ್ಕೂ ದೇವರ ವಾಕ್ಯದ ಅಗತ್ಯತೆ ಇದೆ. ಆ ಉಪದೇಶವನ್ನು ಈಗಾಗಲೇ ನೀಡಲಾಗಿದೆ. ಆದರೆ ಕೆಲವರಿಗೆ, ದೇವರ ವಾಕ್ಯದಲ್ಲಿ ಪ್ರಕಟವಾಗಿರುವ ಸತ್ಯವು ಸಾಲದೆ ಇರುತ್ತದೆ. ಅವರಿಗೆ ಹೊಸ ಮತ್ತು ವಿಧ ವಿಧವಾದ ಮಾಹಿತಿಯ ಬಯಕೆ ಇದೆ; ದೇವರು ಅನುಗ್ರಹಿಸಿರುವದರಲ್ಲಿ ಸಂತೃಪ್ತರಾಗಿ ಇರುವದಿಲ್ಲ. ಅದರ ಪರಿಣಾಮವಾಗಿ, ಅಲಕ್ಷ್ಯಮಾಡಿ, ದೇವರ ವಾಕ್ಯವನ್ನು ಮತ್ತು ದೇವರ ಶಕ್ತಿಯನ್ನು ಕಳಕೊಂಡಿರುತ್ತಾರೆ. ವ್ಯತ್ಯಾಸವುಳ್ಳ ಬೋಧನೆಯು ಆಕರ್ಷಕ ಹಾಗೂ ಪ್ರಚೋದನಕಾರಿಯಾಗಿರುತ್ತದೆ; ಆದರೆ ಅದು ಶಕ್ತಿ ಹೀನವಾಗಿರುತ್ತದೆ. ಯಾಕೆಂದರೆ ಅದು ದೇವರ ವಾಕ್ಯವಲ್ಲ. ದೇವರಲ್ಲಿ ಮಾತ್ರ ಶಕ್ತಿಯಿದೆ ದೇವರು ಮಾತ್ರ ತನ್ನ ವಾಕ್ಯದ ಮೂಲಕ ಭಲವನ್ನು ರಕ್ಷಣೆಯನ್ನು ನೀಡುವನು!

ಫಲನೀಡುವದಕ್ಕೂ, ಪೋಷಣೆಗೂ, ಮತ್ತು ಕ್ರೈಸ್ತರ ವೃದ್ಧಿಗೂ ದೇವರ ವಾಕ್ಯದ ಅಗತ್ಯತೆಯಿದೆ. ಲೂಕ 8ರಲ್ಲಿ ವಿವಿಧ ಮಣ್ಣಿನ ಕುರಿತಾದ ಯೇಸುವಿನ ದೃಷ್ಟಾಂತದಲ್ಲಿ ತಮ್ಮ ಹೃದಯದಲ್ಲಿ ದೇವರ ವಾಕ್ಯವನ್ನು ಉಪಯೋಗಿಸಿಕೊಂಡವರು ಚಿಗುರಿ, ಬೆಳೆದು ಸಮೃದ್ಧರಾದರು. ಅದೇ ರೀತಿಯಲ್ಲಿ, ದೇವರನ್ನು ಮೆಚ್ಚುವ ದಾರಿಯಲ್ಲಿ ವೃದ್ಧಿ ಹೊಂದಬೇಕಾದರೆ, ಮಾರ್ಗದರ್ಶನಕ್ಕೆ ದೇವರ ವಾಕ್ಯವನ್ನು ಬಳಸಿಕೊಳ್ಳಬೇಕು.

## ನಮ್ಮ ಸಂತೈಸುವಿಕೆಗಾಗಿ ದೇವರು ಸತ್ಯವನ್ನು ಉಪಯೋಗಿಸುವನು (2:16, 17)

ದೇವರ ವಾಕ್ಯವು ದೇವರ ಬಯಕೆಗಳನ್ನು ಈಡೇರಿಸುವದಕ್ಕೆ ಶಕ್ತಿಯನ್ನು ನೀಡುವದು ಮಾತ್ರವಲ್ಲದೆ: ಆದರಣೆಯನ್ನು ಹಾಗೂ ನಿರೀಕ್ಷೆಯನ್ನು ನೀಡುತ್ತದೆ. ದೇವರ ವಾಕ್ಯದ ಮೂಲಕ ನೀಡುವ ಸಂರಕ್ಷಣೆ ಹಾಗೂ ನಿತ್ಯತ್ವದ ಉತ್ತೇಜನವನ್ನು ನಾವು ಹೊಂದಬೇಕೆಂದು ದೇವರು ಬಯಸುತ್ತಾನೆ. ಅ ಧೈರ್ಯಗೊಂಡವರನ್ನು ಉತ್ತೇಜಿಸಲು ಪೂರ್ಣ ಸತ್ಯವೇದವನ್ನು ಬಳಸಬಹುದು. ಪೌಲನು ಬರೆದಂತೆ, "ಪೂರ್ವದಲ್ಲಿ ಬರೆದದೆಲ್ಲಾ ನಮ್ಮನ್ನು ಉಪದೇಶಿಸುವದಕ್ಕಾಗಿ ಬರೆಯಲ್ಪಟ್ಟಿತು. ನಾವು ಓದಿ ಸ್ಥಿರಚಿತ್ತವನ್ನೂ ಆದರಣೆಯನ್ನೂ ಹೊಂದಿ ರಕ್ಷಣೆಯ ನಿರೀಕ್ಷೆಯುಳ್ಳವರಾಗಿರುವಂತೆ ಆ ಗ್ರಂಥಗಳು ಬರೆಯಲ್ಪಟ್ಟವು" (ರೋಮಾಪುರ 15:4).

"ಆತನು ಕನಿಕರವುಳ್ಳ ತಂದೆಯು, ಸಕಲ ವಿಧವಾಗಿ ಸಂತೈಸುವ ದೇವರು" (2 ಕೊರಿಂಥ 1:3ಬಿ). ಎಂಬುದು ಕರುಣೆಯುಳ್ಳವನು, ಚಿಂತಕನು, ಪೋಷಿಸುವಂತ ಸ್ವಭಾವವಿರುವ ದೇವರು ಎಂಬ ವಿವರಣೆಯನ್ನು ಒತ್ತಿ ಹೇಳುತ್ತದೆ. ಥೆಸಲೊನೀಕದವರು ಹಿಂಸೆಯನ್ನು ತಾಳಿಕೊಳ್ಳುವಂತೆ ತಂದೆಯಾದ ದೇವರ ಹಾಗೂ ಯೇಸುವಿನ ಪ್ರೀತಿಯ ಆದರಣೆಯು ಅವರಿಗೆ ಉತ್ತೇಜನದ ಸ್ವರ್ಥ್ಯವಾಗಿತ್ತು. ಮತ್ತು "ನಮ್ಮನ್ನು ಪ್ರೀತಿಸಿ ನಮಗೆ ನಿತ್ಯವಾದ ಆದರಣೆಯನ್ನು ಉತ್ತಮವಾದ ನಿರೀಕ್ಷೆಯನ್ನು" ಕೃಪೆಯಿಂದ ಅನುಗ್ರಹಿಸಿದ "ನಮ್ಮ ತಂದೆಯಾದ ದೇವರು ನಮ್ಮ ಕರ್ತನಾದ ಯೇಸು ಕ್ರಿಸ್ತನು ನಿಮ್ಮ ಹೃದಯಗಳನ್ನು ಸಂತೈಸಲಿ" (2:16).

## ದೇವರು ಸತ್ಯದ ಮೂಲಕ ನಮ್ಮನ್ನು ಕಾಪಾಡುತ್ತಾನೆ (3:1-5)

ಮಾನವರ ದೇಹಗಳನ್ನು ಹಾಳು ಮಾಡುವಂತ ವಿಷಯಗಳ ಕುರಿತು ಸಾಮಾನ್ಯ ಜ್ಞಾನವನ್ನು ಹೊಂದಿರುತ್ತೇವೆ. ಸರಿಯಾದ ಆಹಾರವನ್ನು ತಿನ್ನಲು ಪ್ರಯತ್ನಿಸುತ್ತೇವೆ, ರಸ್ತೆಯಲ್ಲಿ ಸುರಕ್ಷಿತವಾಗಿ ಪ್ರಯಾಣಿಸುತ್ತೇವೆ, ವಿದ್ಯುಚಕ್ತಿ ಹಾಗೂ ಬೆಂಕಿಯ ಬಗ್ಗೆ ಎಚ್ಚರವುಳ್ಳವರಾಗಿದ್ದು ನಮ್ಮ ದೇಹವನ್ನು ಕಾಪಾಡಿಕೊಳ್ಳುವ ಇತರೆ ಕಾರ್ಯಗಳನ್ನು ಮಾಡುತ್ತೇವೆ ಆತ್ಮಗಳು ಸಹ ನಾಶವಾಗುವದಕ್ಕೆ ಸಾಧ್ಯವಿದೆ. ನಮ್ಮ ಆತ್ಮಗಳನ್ನು ನಾಶಪಡಿಸಲು ಸೈತಾನನು ಸಕಲ ವಿಧವಾದ ಪ್ರಭಾವವನ್ನು ಬೀರುತ್ತಾನೆ. ಅಪಾಯಕರವಾದ ಅಭ್ಯಾಸಗಳು ನಮಗೆ ಒಳ್ಳೆಯದೆಂದು ತಿಳಿಸುತ್ತಾನೆ. ಸುಳ್ಳಿನ ವಿಚಾರಗಳನ್ನು ಸತ್ಯವೆಂದು ಹೇಳುತ್ತಾನೆ. ಅವನು ಜನರ ಮೂಲಕ, ವಸ್ತುಗಳ ಹಾಗೂ ಯೋಜನೆಗಳ ಮೂಲಕ ನಮ್ಮನ್ನು ತಿರುಚಿ ನಾಶಪಡಿಸುತ್ತಾನೆ. ಸೈತಾನನು ವಸ್ತುಗ ಳನ್ನು ಹಾಗೂ ಮನುಷ್ಯರನ್ನು ಉಪಯೋಗಿಸಿ ನಮ್ಮ ಆತ್ಮಗಳನ್ನು ಎದರಿಸುತ್ತಾನೆ!

ಆತ್ಮಗಳಿಗೆ ವಿರುದ್ಧವಾದ ಆಕ್ರಮಣದ ಶಕ್ತಿಯನ್ನು ಎದುರಿಸಲು ಯಾರಿಗೆ ಸಾಧ್ಯವಿದೆ? ಯೇಸು ಕ್ರಿಸ್ತನ ಮೂಲಕ ದೇವರು ನಮ್ಮ ಆತ್ಮಗಳನ್ನು ಪಾಪದಿಂದ ರಕ್ಷಿಸಿ ಹಾಗೂ ನಮ್ಮ ಜೀವಿತಕ್ಕೆ ಮಾರ್ಗದರ್ಶನವನ್ನು ನೀಡಿ ಸೈತಾನನ ಬಲೆಯಿಂದ ಬಿಡಿಸಿ ಕಾಪಾಡುತ್ತಾನೆ. ದೇವರ ವಾಕ್ಯವು ಮಾತ್ರ ಸುಳ್ಳಿನಿಂದಲೂ ಹಾಗೂ ಸೈತಾನನ ಕುಯುಕ್ತಿಯಿಂದಲೂ ಬಿಡಿಸಿ ಕಾಪಾಡುವನು. ದೇವರ ವಾಕ್ಯವು ನಮ್ಮನ್ನು ಪ್ರತಿದಿನದ ಜೀವಿತದಲ್ಲಿ ಸರಿಯಾದ ಮಾರ್ಗದಲ್ಲಿ ನಡಿಸುತ್ತದೆ: "ಆದರೆ ಕರ್ತನು ನಂಬಿಗಸ್ತನು: ಆತನು ನಿಮ್ಮನ್ನು ದೃಢಪಡಿಸಿ ನೀವು ಕೆಡುಕನ ಕೈಗೆ ಸಿಕ್ಕದಂತೆ ಕಾಪಾಡುವನು" (3:3).

ದೇವರ ವಾಕ್ಯವು ಮಾತ್ರ ನಮ್ಮನ್ನು ಸೈತಾನನಿಂದ ಬಿಡಿಸಿ ಕಾಪಾಡುವದರಿಂದ, ದೇವರ ವಾಕ್ಯವನ್ನು ಸಾಧ್ಯವಾದಷ್ಟು ಆತ್ಮಗಳಿಗೆ ಪ್ರಕಟಿಸಬೇಕು. ಇದು ಐಶ್ವರ್ಯವಂತನಿಗೂ ಹಾಗೂ

ಬಡವನಿಗೂ ಸಹ ಅಗತ್ಯವಿದೆ. ಸೈತಾನನ ಪ್ರಭಾವಕ್ಕೆ ಜನರು ಒಳಗಾಗದಂತೆ ಕ್ರೆಸ್ತರು ದೇವರ ವಾಕ್ಯದಿಂದ ಪ್ರಭಾವಿತರಾಗಿ ಪ್ರಾರ್ಥಿಸಬೇಕೆಂದು ಪೌಲನು ಕೇಳಿಕೊಂಡನು: "ಕಡೆ ಮಾತೇನೆಂದರೆ, ಸಹೋದರರೆ, ನಮಗೋಸ್ಕರ ಪ್ರಾರ್ಥನೆ ಮಾಡಿರಿ. ಕರ್ತನ ವಾಕ್ಯವು ನಿಮ್ಮಲ್ಲಿ ಹಬ್ಬಿದ ಪ್ರಕಾರ ಎಲ್ಲೆಲ್ಲಿಯೂ ಬೇಗನೇ ಹಬ್ಬಿ ಪ್ರಖ್ಯಾತಿ ಹೊಂದುವ ಹಾಗೆಯೂ ದೇವರು ನಮ್ಮನ್ನು ಮೂರ್ಖರಾದ ದುಷ್ಟಜನರ ಕೈಯಿಂದ ತಪ್ಪಿಸುವ ಹಾಗೆಯೂ ಪ್ರಾರ್ಥಿಸಿರಿ; ಎಲ್ಲರಲ್ಲಿ ಕ್ರೈಸ್ತ ನಂಬಿಕೆ ಇಲ್ಲವಲ್ಲ" (3:1, 2).

## ಮುಕ್ತಾಯ

ಸತ್ಯವು ಯಾವಾಗಲೂ ಸತ್ಯವಾಗಿರುತ್ತದೆ. ಆದರೆ ದೇವರ ಸತ್ಯವು ಅದಕ್ಕಿಂತಲೂ ಮಿಗಿಲಾದದ್ದು. ಅದು ಜೀವಿತದ ಮಾರ್ಗವು ಮತ್ತು ಪಾಪದಿಂದ ಬಿಡುಗಡೆಯು ಆಗಿರುತ್ತದೆ. ಅದು ರಕ್ಷಿಸುವದಕ್ಕೂ, ಪೋಷಿಸುವದಕ್ಕೂ ಮತ್ತು ಸಂತೈಸುವಿಕೆಗೂ ಶಕ್ತಿಯಾಗಿರುತ್ತದೆ. "ಆಗ ಯೇಸು ನೀವು ನನ್ನ ವಾಕ್ಯದಲ್ಲಿ ನೆಲೆಗೊಂಡವರಾದರೆ ನಿಜವಾಗಿ ನನ್ನ ಶಿಷ್ಯರಾಗಿದ್ದು ಸತ್ಯವನ್ನು ತಿಳಿದುಕೊಳ್ಳುವಿರಿ ಮತ್ತು ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವದೆಂದು ಹೇಳಿದನು" (ಯೋಹಾನ 8:31, 32). ನಿಜವಾದ ಶಿಷ್ಯನು ಯೇಸುವಿನಲ್ಲಿ ಪ್ರಕಟವಾಗಿರುವ ಮೌಲ್ಯವಾದ ಸತ್ಯವನ್ನೇ ನೋಡುವನು. ಅವನು ಅದನ್ನು ಕಂಡುಕೊಂಡು ಅದನ್ನು ನಂಬಿ ಮತ್ತು ಆ ದೇವರ ಸತ್ಯಕ್ಕೆ ಬೆಲೆಯನ್ನು ನೀಡುವನು!

ನಾವು ದೇವರ ವಾಕ್ಯವನ್ನು ಧ್ಯಾನಮಾಡಿ ಹಂಚಿಕೊಳ್ಳುವಾಗ ಅದು ಇತರರಿಗೆ ಸಹಾಯಕವಾಗುವಂತೆ ಪ್ರತಿಫಲವನ್ನು ನೀಡಿ ಅದು ದೇವರಿಗೆ ಮಹಿಮೆಯನ್ನು ತರುತ್ತದೆ. ಅದು ಉತ್ತಮವಾದ ಫಲವನ್ನು ನೀಡುತ್ತದೆ. "ಅದು ಸತ್ಕಾರ್ಯ ಮತ್ತು ಸದ್ವಾಕ್ಯವನ್ನು ನೀಡುತ್ತದೆ" (2:17).

ದೇವರ ವಾಕ್ಯಕ್ಕೆ ಹತ್ತಿರವಾಗಿರುವ ಹೃದಯವು ದೇವರ ಭಕ್ತಿಯ ಹೃದಯವಾಗಿರುತ್ತದೆ. ಅದು ದೇವರ ಹಾಗೂ ಕ್ರಿಸ್ತನ ಹೃದಯದಂತಿರುತ್ತದೆ. ಆ ಹೃದಯವು ದೇವರ ಸ್ವಭಾವವನ್ನು ಹಾಗೂ ಕ್ರಿಸ್ತನ ಆಲೋಚನೆಗಳನ್ನು ಮಾತುಗಳನ್ನು, ಮತ್ತು ಕ್ರಿಯೆಗಳನ್ನು ನಡೆಸುವಂತದ್ದಾಗಿರುತ್ತದೆ. ಅದು ಶಕ್ತಿಯ, ಪ್ರೀತಿಯ, ಸಂತೈಸುವಿಕೆಯ ಹೃದಯವಾಗುತ್ತದೆ! ದೇವರು ತನ್ನ ವಾಕ್ಯದ ಮೂಲಕವಾಗಿ ಆತ್ಮೀಕ ಜೀವಿತವನ್ನು ಪ್ರಾರಂಭಿಸುವಂತೆಯು, ಬಲದಿಂದ ವೃದ್ಧಿಸ್ಸುವಂತೆಯೂ ಹಾಗೂ ಸಂತೈಸುವಂತೆಯು, ಕೆಡುಕನಿಂದ ಸಂರಕ್ಷಿಸುವಂತೆಯು ಸಹಾಯಿಸಿ ಮತ್ತು ದೇವರ ಅಮೂಲ್ಯವಾದ ಪ್ರತಿಫಲವನ್ನು ಉಂಟುಮಾಡಲಿ 3:5ರ ವಾಕ್ಯದಲ್ಲಿರುವಂತೆ, "ದೇವರ ಪ್ರೀತಿಯಲ್ಲಿಯು ಕ್ರಿಸ್ತನ ತಾಳ್ಮೆಯಲ್ಲಿಯು ಸೇರುವಂತೆ ಕರ್ತನೆ, ನಿಮ್ಮನ್ನು ನಡಿಸಲಿ."